# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 503
ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು
ವಿಷಯ : ಆರ್ಥಿಕ ಸೌಲಭ್ಯಗಳ ನೇರ ಪ್ರಯೋಜನ ವರ್ಗಾವಣೆ(ಡಿಬಿಟಿ) ಬಗ್ಗೆ
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು
ಉತ್ತರಿಸುವ ದಿನಾಂಕ : 22-12-2022

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಆರ್ಥಿಕ ಸೌಲಭ್ಯಗಳ ನೇರ ಪ್ರಯೋಜನ ವರ್ಗಾವಣೆ (ಡಿಬಿಟಿ) ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆಯೇ; ನೇರ ಪ್ರಯೋಜನಗಳ ವರ್ಗಾವಣೆ ಪ್ರಕ್ರಿಯೆಯನ್ನು ಸೂಕ್ತವಾಗಿ ಉಸ್ತುವಾರಿ ನಡೆಸಿರುವುದು ಈ ವಿಳಂಬಕ್ಕೆ ಕಾರಣವಾಗಿದೆಯೇ; ಇದರಿಂದ ಕೇವಲ 35% ಯೋಜನೆಗಳನ್ನು ಗುರುತಿಸಲಾಗಿರುತ್ತದೆಯೇ ಪ್ರತಿಶತ 83% ಯಶಸ್ವಿಯಾಗಿದ್ದರು, ಹಲವಾರು ಪ್ರಕರಣಗಳಲ್ಲಿ ಪ್ರಕ್ರಿಯೆಯು ನಿಧಾನಗತಿಯಲ್ಲಿ ಸಂಸ್ಕರಣೆ ಗೊಳ್ಳುತ್ತಿರುವುದರಿಂದ ಯೋಜನೆಗಳ ಪ್ರಯೋಜನ ನೀಡುವಲ್ಲಿ ವಿಳಂಬವಾಗಿರುವುದು ನಿಜವೇ: | ಕರ್ನಾಟಕ ಏಕೀಕೃತ ನೇರ ನಗದು ವರ್ಗಾವಣೆ ವೇದಿಕೆಯನ್ನು (ಡಿ.ಬಿ.ಟಿ ಪೋರ್ಟಲ್) 2018-19ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗಿದೆ. ಸದರಿ ವೇದಿಕೆಯಲ್ಲಿ ಇಲ್ಲಿಯವರೆಗೂ 300 ಯೋಜನೆಗಳನ್ನು ಒಳತರಲಾಗಿದೆ.<br><br>ಕರ್ನಾಟಕ ಏಕೀಕೃತ ನೇರನಗದು ವರ್ಗಾವಣೆ ವೇದಿಕೆ ಮೂಲಕ 9.34 ಕೋಟಿ ಸಂಖ್ಯೆಯ ವಹಿವಾಟುಗಳನ್ನು ಪಾವತಿಗೆ ಪ್ರಕ್ರಿಯೆಗೊಳಿಸಲಾಗಿದ್ದು, ಅವುಗಳ ಪೈಕಿ 9.29 ಕೋಟಿ ಸಂಖ್ಯೆಯ ವಹಿವಾಟುಗಳಿಗೆ ಯಶಸ್ವಿಯಾಗಿ ಹಣವನ್ನು ಪಾವತಿಸಲಾಗಿದೆ. ಅದರಂತೆ, 99% ವಹಿವಾಟುಗಳು ಯಶಸ್ವಿಯಾಗಿ ಪಾವತಿಸಲಾಗಿದೆ. ಉಳಿದ 1% ವಹಿವಾಟುಗಳು ವಿಫಲವಾಗಿರುವುದು ಸಹ ತಾಂತ್ರಿಕ ಅಡಚಣೆಯಿಂದಾಗದೆ ಫಲಾನುಭವಿಗಳ ಬ್ಯಾಂಕ್ ಖಾತೆಯ ಸಮಸ್ಯೆಗಳಿಂದಾಗಿದೆ. |
| ಆ) | ಡಿ.ಬಿ.ಟಿ ಪೋರ್ಟಲ್ ಮತ್ತು ಬ್ಯಾಂಕ್ ಗಳಿಂದ ಚೆಕ್‌ಗಳನ್ನು ಸರಿಯಾಗಿ ಊರ್ಜಿತಗೊಳಿಸದೆ ಬೇರೆ ಖಾತೆಗಳಿಗೆ ತಪ್ಪಾಗಿ ನೇರ ಪ್ರಯೋಜನಗಳು ವರ್ಗಾವಣೆ ಗೊಳ್ಳುತ್ತಿರುವುದು ನಿಜವೇ; ಇದರಿಂದ ಉದ್ಭವಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿಳಂಬವಾಗಿದ್ದು ಮತ್ತು ಸೂಕ್ತವಾದ ಅರ್ಹ ಫಲಾನುಭವಿಗಳಿಗೆ ಸಕಾಲದಲ್ಲಿ ತಲುಪುತ್ತಿಲ್ಲದಿರುವುದು ಮೂಲ ಡಿ.ಬಿ.ಟಿ ಪೋರ್ಟಲ್ ಮತ್ತು ಅರ್ಜಿಗಳನ್ನು ಸಮನ್ವಯಗೊಳಿಸದೆ ಇರುವುದು. ಈ ನ್ಯೂನತೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇವುಗಳನ್ನು ಪರಿಹರಿಸಲು ಕೈಗೊಂಡ ಕ್ರಮಗಳೇನು (ವಿವರವನ್ನು ನೀಡುವುದು) | ಡಿ.ಬಿ.ಟಿ ಪೋರ್ಟಲ್‌ನಲ್ಲಿ ಪಾವತಿಗಳನ್ನು NPCI ನ NACH-Aadhaar Based Payment ಮೂಲಕ ಮಾಡಲಾಗುತಿದೆ. ಆದುದರಿಂದ ಇದರಲ್ಲಿ ಚೆಕ್ ಬಳಕೆಯಾಗುವುದಿಲ್ಲ. NACH-Aadhaar Based Payment ವ್ಯವಸ್ಥೆಯಲ್ಲಿ ಆಧಾರ್ ಸಂಖ್ಯೆಯನ್ನು ಬ್ಯಾಂಕ್ ಖಾತೆಗೆ ಫಲಾನುಭವಿಗಳೇ ತಮ್ಮ ಬ್ಯಾಂಕ್‌ಗೆ ಅರ್ಜಿ ಸಲ್ಲಿಸುವ ಮೂಲಕ ಮಾಡಬೇಕಾಗಿದೆ. ಆದ್ದದರಿಂದ ಆಧಾರ್ ಸಂಖ್ಯೆಯನ್ನು ಬ್ಯಾಂಕ್ ಖಾತೆಗೆ ಜೋಡಿಸುವ ಜವಾಬ್ದಾರಿಯು ಫಲಾನುಭವಿ ಮತ್ತು ಬ್ಯಾಂಕ್‌ದಾಗಿರುತ್ತದೆ. ಕೆಲವು ಸಂದರ್ಭದಲ್ಲಿ ಆಧಾರ್ ಸಂಖ್ಯೆಯನ್ನು ಸರಿಯಾದ ಬ್ಯಾಂಕ್ ಖಾತೆಗೆ ಜೋಡಿಸದೆ ತಪ್ಪಾಗಿ ಹಣ ವರ್ಗಾವಣೆಯಾಗುವ ಸಾಧ್ಯತೆಯಿದೆಯಾದರೂ, ಇದು ಬಹಳ ವಿರಳ. ಇಂತಹ ಸಂದರ್ಭದಲ್ಲಿ ಫಲಾನುಭವಿಗಳು ಸರ್ಕಾರಕ್ಕೆ ಅರ್ಜಿ ನೀಡಿದಲ್ಲಿ, ಸಂಬಂಧಪಟ್ಟ ಬ್ಯಾಂಕ್‌ಗೆ ಸಂಪರ್ಕಿಸಿ ಹಣವನ್ನು ಹಿಂಪಡೆದು ಫಲಾನುಭವಿಗಳಿಗೆ ಪಾವತಿಸಲು ಅವಕಾಶವಿದೆ. ಫಲಾನುಭವಿಗಳಿಗೆ ತಮ್ಮ ಆಧಾರ್ ಸಂಖ್ಯೆ ಯಾವ ಬ್ಯಾಂಕ್‌ಗೆ ಜೋಡಿತವಾಗಿದೆ ಎಂಬ ಮಾಹಿತಿಯನ್ನು ಡಿಬಿಟಿ ಮೊಬೈಲ್ ಆಪ್ ಮೂಲಕವಲ್ಲದೇ ಫಲಾನುಭವಿ ವಿವಿಧ ಯೋಜನೆಗಳಡಿಯಲ್ಲಿ ಅರ್ಜಿ ಸಲ್ಲಿಸುವಾಗ ಸಹ ನೀಡಲಾಗುತ್ತಿದೆ |
| ಇ) | ಪರಿಪೂರ್ಣವಲ್ಲದ "ಕ್ಷೀರಸಿರಿ ತಂತ್ರಾಂಶದ ಮೂಲಕ ನೇರ ಪ್ರಯೋಜನ ವರ್ಗಾವಣೆ ಮಾಡುತ್ತಿದ್ದು, ಈ ತಂತ್ರಾಂಶದಲ್ಲಿ 11 ಮಾಡ್ಯೂಲ್ ಗಳಲ್ಲಿ ಕೇವಲ 5 ಮಾಡ್ಯೂಲ್ ಗಳನ್ನು ಅಳವಡಿಸಿ, ಸಮಗ್ರವಾದ | 'ಕ್ಷೀರಸಿರಿ' ತಂತ್ರಾಂಶವನ್ನು ಸರ್ಕಾರವೇ ಅಭಿವೃದ್ಧಿಪಡಿಸಿ ಅಳವಡಿಸಿದ್ದು, ಅನಧಿಕೃತವಾಗಿ 'ಕ್ಷೀರಸಿರಿ' ತಂತ್ರಾಂಶದಲ್ಲಿ ಆಡಳಿತ ಮಂಡಳಿಗಳಿಂದ ಬದಲಾವಣೆ ಮಾಡುವ ಸಾಧ್ಯತೆ ಇರುವುದಿಲ್ಲ. |

FA/998906

| | | |
|---|---|---|
| | ತಂತ್ರಾಂಶಗಳನ್ನು ಉಪಯೋಗಿಸದೆ ವಿವಿಧ ಸೊಸೈಟಿಗಳಿಂದ ಬೇರೆ ಬೇರೆ ತಂತ್ರಾಂಶಗಳು ಬಳಕೆಯಾಗುತ್ತಿರುವುದರಿಂದ ದತ್ತಾಂಶಗಳ ಕ್ರೋಢೀಕರಣಗೊಳ್ಳದೆ ಹಾಲು ಸರಬರಾಜಿನ ಮೌಲ್ಯ ಮತ್ತು ಗುಣಮಟ್ಟದ ಬಗ್ಗೆ ಕ್ಷೀರಸಿರಿ ತಂತ್ರಾಂಶದಲ್ಲಿ ದಸಾವೇಜುಗಳ ಬಗ್ಗೆ ಮಾಹಿತಿ ಇರದೆ ಬದಲಾಗುವ ಆಡಳಿತ ಮಂಡಳಿಗಳಿಂದ ಅನಧಿಕೃತವಾಗಿ "ಕ್ಷೀರಸಿರಿ'' ತಂತ್ರಾಂಶದಲ್ಲಿ ಬದಲಾವಣೆಗಳನ್ನು ಮಾಡಲಾಗುತ್ತಿದ್ದು, ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

ಕಡತ ಸಂಖ್ಯೆ: ಸಿಆಸುಇ 148 ಪಿಆರ್‌ಜೆ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ